IJRAR.ORG E-ISSN: 2348-1269, P-ISSN: 2349-5138

INTERNATIONAL JOURNAL OF RESEARCH AND ANALYTICAL REVIEWS (IJRAR) | IJRAR.ORG

An International Open Access, Peer-reviewed, Refereed Journal

# ಔದಾರ್ಯದ ಉರುಳಲ್ಲಿ' ಮತ್ತು 'ಸ್ವಾತಂತ್ರ್ಯದೆಡೆಗೆ' ಕಾದಂಬರಿಗಳಲ್ಲಿ ಸ್ವಾತಂತ್ರ್ಯಾ ಚಳವಳಿಯ ಸ್ವರೂಪ

**ಡಾ|| ರಾಜೇಂದ್ರ ಟಿ**

ಮುಖ್ಯಸ್ಥರು, ಕನ್ನಡ ವಿಭಾಗ,

ಕದಂಬ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ–೫೭೭೪೨೮

ಶಿಕಾರಿಪುರ ತಾ|| ಶಿವಮೊಗ್ಗ ಜಿಲ್ಲೆ.

ಭಾರತ ಸ್ವಾತಂತ್ರ್ಯಾ ಚಳವಳಿಯು ಜಗತ್ತಿನ ಚಳವಳಿಗಿಂತ ಭಿನ್ನವಾದುದು. ಭಾರತೀಯ ಸಾಧು ಸಂತರು, ಕೂಲಿ ಕಾರ್ಮಿಕರು, ಹೆಣ್ಣು–ಗಂಡೆಂಬ ಭೇದ ಭಾವವಿಲ್ಲದೆ ಅಹಿಂಸಾ ಮಾರ್ಗದ ಮುಖಾಂತರ ಸ್ವಾತಂತ್ರ್ಯಾದ ಆಂದೋಲನಕ್ಕೆ ಧುಮುಕಿದ್ದಾರೆ. ದೇಶದಾದ್ಯಂತ ನಡೆದ ಈ ಆಂದೋಲನ ತೀವ್ರವಾದ ಕಾವನ್ನು ಮೂಡಿಸಿ, ಬ್ರಿಟೀಷರ ಎದೆಯಲ್ಲಿ ನಡುಕ ಹುಟ್ಟಿಸಿದ ಸಮರ ಜ್ವಾಲೆಯಾಗಿ ಪರಿಣಮಿಸಿದೆ. ಹಾಗೆಯೇ ಕನ್ನಡ ನಾಡಿನ ಬರಹಗಾರರ ಕೊಡುಗೆಯೂ ಅನನ್ಯವಾಗಿದೆ. ಪ್ರಮುಖವಾಗಿ ನವೋದಯ ಸಾಹಿತ್ಯ ಪಂಥದ ಕಾಲಘಟ್ಟವಂತೂ ರಾಷ್ಟ್ರೀಯತೆಯ, ದೇಶ ಪ್ರೇಮದ ಭಾವನೆಯನ್ನು ಹಾಗೂ ಸ್ವಾತಂತ್ರ್ಯದ ಪ್ರೇರಣೆಯನ್ನು ಭಾರತೀಯರಲ್ಲಿ ಬಡಿದೆಬ್ಬಿಸಿದೆ ಎಂದು ಹೇಳಬಹುದು. ಅದರಲ್ಲೂ ಈ ಕಾಲಘಟ್ಟದ ಇಬ್ಬರೂ ಮಹಾ ಕಾದಂಬರಿಕಾರರಾದ ಡಾ. ಶಿವರಾಮ ಕಾರಂತರು ಹಾಗೂ ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟದ ಮಜಲುಗಳನ್ನು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಎರಡು ಧ್ರುವಗಳಲ್ಲಿ ಉಂಟಾಗದ ಚಳವಳಿಯ ವಿಭಿನ್ನ ನೆಲೆಗಳನ್ನು ಪ್ರತಿನಿಧಿಸುತ್ತವೆ.

ಡಾ. ಕೆ. ಶಿವರಾಮ ಕಾರಂತರು ಕನ್ನಡ ಸಾಹಿತ್ಯ ಜಗತ್ತಿನ ಬಹುಮುಖ ಪ್ರತಿಭೆಯ ಚಿಂತಕ, ವಿಚಾರವಾದಿ, ವಾಸ್ತವವಾದಿ ಸಾಹಿತಿಯಾಗಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿಯೆ ಮಹಾತ್ಮ ಗಾಂಧೀಜಿಯವರ ಆದರ್ಶವಾದದ ಪ್ರೇರಣೆಗೆ ಒಳಗಾದ ಕಾರಂತರು ತಮ್ಮ ವ್ಯಾಸಂಗಕ್ಕೆ ತಿಲಾಂಜಲಿಯನ್ನು ಕೊಟ್ಟು ನೇರವಾಗಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದವರು. ಇನ್ನೂ ಹದಿಹರೆಯದ ವಯಸ್ಸಿಲ್ಲಿಯೇ ಸ್ವಾತಂತ್ರ್ಯಾ ಹೋರಾಟದ ಮುಂಚೂಣಿಯಲ್ಲಿ ರಾಷ್ಟ್ರಿಯ ಕಾಂಗ್ರೇಸ್‌ನ ಧ್ಯೇಯ–ಧೋರಣೆಗಳನ್ನು ಕುರಿತು ಉಪನ್ಯಾಸಗಳನ್ನು ನೀಡುತ್ತಾ, ಭಾರತೀಯರ ಮನಸ್ಸಿನಲ್ಲಿ ದೇಶ ಪ್ರೇಮದ, ಸ್ವಾಭಿಮಾನದ ಭಾವನೆಗಳನ್ನು ನೀಡಿದರು. ಖಾದಿ ಉತ್ಪನ್ನ, ಸ್ವದೇಶಿ ಚಳವಳಿ, ವಿದೇಶಿಯ ಉತ್ಪನ್ನಗಳನ್ನು ಸುಡುವ, ಚರಕದಲ್ಲಿ ನೂಲುವ ಮುಂತಾದ ಚಟುವಟಿಕೆಗಳು, ಖಾದಿ ಭಂಡಾರ, ಗಾಂಧಿ ಫಂಡ್ ಇತ್ಯಾದಿ ದೇಶ ಸೇವೆಯನ್ನು ಕೈಗೊಂಡರು. ಈ ಎಲ್ಲಾ ಧ್ಯೇಯಗಳು ರಾಷ್ಟ್ರೀಯತೆಯ ಭಾವನೆಗೆ ಪ್ರೇರಣೆಯಾಗಿ ಸಾಹಿತ್ಯದ ಮೂಲಕವೂ ಅದನ್ನು ಬಲಪಡಿಸಿದರು. ಆದರ್ಶವಾದ, ರಾಷ್ಟ್ರಭಕ್ತಿ–ಸ್ವಾತಂತ್ರ್ಯಾ ಚಳವಳಿಗೆ ಸ್ಪಂದಿಸಿ ಸಾಹಿತ್ಯ ರಚನೆಯನ್ನು ಮಾಡಿದರು. 'ರಾಷ್ಟ್ರಗೀತ ಸುಧಾಕರ',(ಕವನಗಳು), ಮರಳಿಮಣ್ಣಿಗೆ, 'ಔದಾರ್ಯದ ಉರುಳಲ್ಲಿ' ಕಾದಂಬರಿಗಳು ಕಾರಂತರ ದೇಶಭಕ್ತಿ, ರಾಷ್ಟ್ರೀಯತೆ ಕಲ್ಪನೆ ಮತ್ತು ಸ್ವಾತಂತ್ರ್ಯ ಆಂದೋಲನವನ್ನು ಪ್ರತಿನಿಧಿಸುವ ಕೃತಿಗಳಾಗಿವೆ. ಮುಖ್ಯವಾಗಿ ಅವರ 'ಔದಾರ್ಯದ ಉರುಳಲ್ಲಿ', ಕಾದಂಬರಿಯು ೧೯೪೭ರಲ್ಲಿ ಪ್ರಕಟವಾಗಿದೆ. ಶಿವರಾಮ ಕಾರಂತರ ಮರಳಿಮಣ್ಣಿಗೆ (೧೯೪೧), ಮೂಜನ್ಮ, ಗೊಂಡಾರಣ್ಯ, ನಾವು ಕಟ್ಟಿದ ಸ್ವರ್ಗ ಕಾದಂಬರಿಗಳು ಭಾರತ ರಾಷ್ಟ್ರೀಯತೆಯ ಪರಿಕಲ್ಪನೆ, ಆದರ್ಶ, ಸ್ವಾತಂತ್ರ್ಯ ಚಳವಳಿಯ ತೀವ್ರತೆ, ಸ್ವಾತಂತ್ರ್ಯೋತ್ತರ ಭಾರತದ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುವ ಕಾದಂಬರಿಗಳಾಗಿವೆ. ಮುಖ್ಯವಾಗಿ ಕಾರಂತರ ಔದಾರ್ಯದ ಉರುಳಲ್ಲಿ ಕಾದಂಬರಿಯಲ್ಲಿ ನಾಯಕ ರಾಧಾಕೃಷ್ಣನು ಬಿ.ಎ ಪದವಿಯನ್ನು ಓದುತ್ತಿರುವಾಗ ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗುತ್ತಾನೆ. ಸ್ವರಾಜ್ಯ ಚಳುವಳಿಯ ವ್ಯಾಮೋಹಕ್ಕೆ ಮಾರುಹೋಗಿ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುತ್ತಾನೆ. ಇನ್ನಿಬ್ಬರು ಗೆಳೆಯರಾದ ಸಖರಾಮ ಶಾಲೆಯೊಂದರಲ್ಲಿ ಉಪಾಧ್ಯಾಯನಾಗಿದ್ದವನು. ಮಂಗಳೂರಿಗೆ ಗಾಂಧಿಯು ಬಂದಾಗ ಅವರ ಮಾತುಗಳಿಂದ ಪ್ರೇರಿತನಾಗಿ ವೃತ್ತಿಗೆ ತಿಲಾಂಜಲಿಯನ್ನಿತ್ತು ರಾಷ್ಟ್ರ ಸಮರಕ್ಕೆ ಧುಮುಕುತ್ತಾನೆ. ಮತ್ತೊಬ್ಬ ಆಪ್ತಗೆಳೆಯನಾದ ಕುಂದಾಪುರದ ಶ್ರೀಮಂತ ಮನೆತನದ ಯುವಕ ಸದಾನಂದ ಕಮ್ತಿ; ಮುಂಬಯಿಯಲ್ಲಿ ವೈದ್ಯಕೀಯ ಪದವಿ ಓದುತ್ತಿದ್ದ ಆತನಿಗೆ ದೇಶ ಸೇವೆಯ ಕೆಲಸಕ್ಕೆ ಹಾತೊರೆದು ರಾಷ್ಟ್ರೀಯ

ಚಳವಳಿಯಲ್ಲಿ ಪಾಲ್ಗೊಳ್ಳಲು ಆಸಕ್ತಿ ಮೂಡುತ್ತದೆ. ಈ ಮೂವರ ಜೋಡಿಯನ್ನು ಕುರಿತು ಜನರು "ಹಿಂದೂ ಸ್ಥಾನಕ್ಕೆ ಒಬ್ಬ ಗಾಂಧಿಯಾದರೆ: ನಮ್ಮ ಕುಂದಾಪುರಕ್ಕೆ ಮೂವರು" [೨] ಎಂದು ಹೇಳುತ್ತಾರೆ. ಅದರಂತೆ ಇವರು ಜನರನ್ನು ರಾಷ್ಟ್ರ ಸಮರಕ್ಕೆ ಅಣಿಯಾಗುವಂತೆ ಮಾಡಬೇಕೆಂಬ ಮಹದಾಸೆ ಹೊಂದಿದ್ದರು. ಕಾಯಿದೆ ಭಂಗ, ಕರನಿರಾಕರಣೆ, ಗ್ರಾಮದ ಜನರನ್ನು ಜಾಗೃತಗೊಳಸುವುದು, ಇಂತಹ ಆದರ್ಶಗಳ ಹಿನ್ನೆಲೆಯಲ್ಲಿ ಊರೂರು ಅಲೆದರು, ಮೈಲುಗಟ್ಟಲೆ ಕಾಲ್ನಡಿಗೆಯಲ್ಲಿ ಅಲೆದಾಟ. ಅನ್ನ, ನೀರು ಕಾಣದೆ, ನಿದ್ರೆಗೆಟ್ಟು ಬಳಲುತ್ತಾರೆ. ಗಾಂಧಿ ಫಂಡು ಸಂಗ್ರಹ, ಜನರಲ್ಲಿ ಸ್ವಾತಂತ್ರ್ಯ ಚಳವಳಿಯ ಬಗ್ಗೆ ತಿಳುವಳಿಕೆ ನೀಡುವುದು, ಹೋರಾಟಕ್ಕೆ ಅವರನ್ನು ಸನ್ನದ್ಧಗೊಳಸುವುದು. ಆದರೆ ಸಖರಾಮ, ಸದಾನಂದ ಕಮ್ತಿಗೆ ಉತ್ಸಾಹ ಕುಂದಿ ಹೋರಾಟದಿಂದ ಹಿಂದೆ ಸರಿಯುತ್ತಾರೆ.

ಆದರೆ ಇದರಿಂದ ವಿಚಲಿತನಾಗದ ರಾಧಾಕೃಷ್ಣ ತನ್ನ ಪ್ರಯತ್ನ ಹೋರಾಟದ ಉತ್ಸಾಹವನ್ನು ಬಿಡದೆ ದುಡಿಯುತ್ತಾನೆ. ಮಂಗಳೂರಿನ ಯುವ ಗಾಂಧಿ ಎಂದು ಪ್ರಸಿದ್ಧರಾದ ದಯಾನಂದ ರಾಯರು 'ದಾನಶೂರರಾಗಿ' ತಮ್ಮ ಶ್ರೀಮಂತಿಕೆಯನ್ನೆಲ್ಲಾ ಹುಸಿ ರಾಷ್ಟ್ರೀಯವಾದಿಗಳ ಕೈಗೊಪ್ಪಿಸಿ ಬೀದಿಗೆ ಬಿದ್ದಾಗ ಅವರ ನೆರವಿನಿಂದ ರಾಧಾಕೃಷ್ಣ ದಲಿತಾಶ್ರಮವನ್ನು ಸ್ಥಾಪನೆ ಮಾಡುತ್ತಾನೆ. ಕೊನೆಗೆ ಅದು ಸ್ವಾರ್ಥಿಗಳ ಪಾಲಾಗಿ ನಿಂತು ಹೋಗುತ್ತದೆ. ದಯಾನಂದ ರಾಯರ ಮತ್ತು ರಾಧಾಕೃಷ್ಣನ ನಿಸ್ವಾರ್ಥ ದೇಶಸೇವೆಗೆ ಸುತ್ತಮುತ್ತಲ ಸ್ವಾರ್ಥಿಗಳ ವಂಚನೆ ಅವರ ರಾಷ್ಟ್ರೀಯ ಚಳವಳಿಗೆ ಅಡ್ಡಿಯಾಗುತ್ತಿರುವುದನ್ನು ಕಾದಂಬರಿಯಲ್ಲಿ ಎಳೆ ಎಳೆಯಾಗಿ ಅನಾವರಣಗೊಳಸಿದ್ದಾರೆ ಕಾರಂತರು. ಡಾ|| ನಂದ ಮತ್ತು ಮಂಗಳೂರು ಮಿರರ್ ಪತ್ರಿಕೆಯ ಸಂಪಾದಕ ಪ್ರಭುದೇವ, ಉತ್ಸಾಹಿ ಯುವಕ ಸಾಣೆಕಲ್ ಅವರ ಪ್ರೇರಣಾದಾಯಕ ಭಾಷಣಗಳು, ಕಾಂಗ್ರೇಸ್ ಸಮಿತಿ ರಚನೆ ಮುಂತಾದವುಗಳಂದ ಯಾವುದೇ ಪ್ರಯೋಜನವಿಲ್ಲವೆಂಬ ಅರಿವು ರಾಧಾಕೃಷ್ಣನಿಗೆ ಉಂಟಾಗುತ್ತದೆ. ನೇರವಾಗಿ ಬ್ರಿಟೀಷರನ್ನು ಪ್ರತಿಭಟಿಸಿದ ಉತ್ಸಾಹಿಗಳೆಲ್ಲಾ ಸೆರೆಮನೆಗೆ ತಳ್ಳಲ್ಪಟ್ಟು ಶಿಕ್ಷೆ ಅನುಭವಿಸಿದರೆ; ಇನ್ನೊಂದೆಡೆ, ಬ್ರಿಟೀಷ್ ಅಧಿಕಾರಿಗಳ, ಪೋಲೀಸರ ದಬ್ಬಾಳಿಕೆ, ಕ್ರೌರ್ಯಗಳಿಗೆ ಜನರು ಬಲಿಯಾಗುತ್ತಾರೆ.

ರಾಧಾಕೃಷ್ಣ ಬ್ರಿಟಿಷರ ವಿರುದ್ಧ ಗುಪ್ತ ಕಾರ್ಯಾಚರಣೆಯ ಮೂಲಕ ಪ್ರತಿಭಟನೆಯನ್ನು ನಡೆಸುತ್ತಾನೆ. ಮಂಗಳೂರಿನ ಪತ್ರಿಕೆಗಳು ಮೌನವಾದಾಗ ಈತ ಗುಪ್ತವಾಗಿ ಚಿಕ್ಕ ಪತ್ರಿಕೆಯನ್ನು ಹೊರಡಿಸುವುದು. ಉತ್ತರ ಕನ್ನಡ ಜಿಲ್ಲೆಯ ನಿರಾಶ್ರಿತರ ಮಕ್ಕಳಿಗೆ ಆಶ್ರಯ ನೀಡುತ್ತಾನೆ. ರಾಧಾಕೃಷ್ಣ ಉತ್ತರ ಕನ್ನಡದ ನಾಗೇನಹಳ್ಳಿಯಲ್ಲಿ ಗುಪ್ತಕಾರ್ಯಾಚರಣೆ, ಇನ್ನೊಂದೆಡೆ ದಲಿತಾಶ್ರಮದ ಏಳ್ಗೆಗೆ ಶ್ರಮಿಸುವುದು, ಹೆಂಡತಿ ಸತ್ಯಾ ಕೂಡ ಪತಿಗೆ ನೆರವಾಗುತ್ತಾಳೆ. ಡಾ|| ನಂದ, ಪ್ರಭುದೇವರ ಸ್ವಾರ್ಥಪರ ನೀತಿಗಳನ್ನು ಬಯಲಿಗೆಳೆಯುವುದು, ನಂದ', ಪ್ರಭುದೇವ, ಕಾಂಗ್ರೇಸ್ ಧುರೀಣ ಬನಹಟ್ಟಿಯವರಂಥ ಸ್ವಾರ್ಥ ನಾಯಕರಿಂದ ಬೇಸತ್ತ ರಾಧಾಕೃಷ್ಣನಿಗೆ ಭ್ರಮನಿರಸ'ವಾಗುತ್ತದೆ. ಅತ್ತ ಗಾಂಧೀಜಿಯವರ, ನೆಹರೂರವ'ರ ಬಿಡುಗಡೆಯಾಗುತ್ತದೆ. ಇದರಿಂದ ವಿಧ್ವಂಸಕ ಕೃತ್ಯ ನಡೆಸುವ ಪುಢಾರಿಗಳು ಕೃತ್ಯದ ಹೊಣೆ ಹೊರುತ್ತಾರೆ. ಇದರಿಂದ ಬೇಸರಗೊಂಡ ರಾಧಾಕೃಷ್ಣ ಬನಹಟ್ಟಿಯ ಹೇಳಿಕೆಯಿದ್ದ ಪತ್ರಿಕೆಗಳನ್ನು ಸುಟ್ಟು ಪ್ರತಿರೋಧ ವ್ಯಕ್ತಪಡಿಸುತ್ತಾನೆ.

ಕಾರಂತರ ಮತ್ತೊಂದು ಮಹತ್ವದ ಕಾದಂಬರಿ 'ಮರಳಿಮಣ್ಣಿಗೆ' ೧೯೪೧ರಲ್ಲಿ ಪ್ರಕಟವಾಯಿತು. ಸಾಮಾಜಿಕ ಕಾದಂಬರಿಯಾದರೂ, ಮೂರನೆಯ ತಲೆಮಾರಿನಲ್ಲಿ ರಾಷ್ಟ್ರೀಯ ಚಳವಳಿಯನ್ನು ಕಾಣಬಹುದು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಾವೇ ನೇರವಾಗಿ ಪಾಲ್ಗೊಂಡಿದ್ದು ಕಾರಂತರು, ಸ್ವತಃ ತಾವೇ ಕಥಾ ನಾಯಕರಾಗಿ ಕಾಣಿಸುತ್ತಾರೆ. ಕೌಟುಂಬಿಕ ಜೀವನದ ಹೋರಾಟ ಒಂದು ಕಡೆಯಾದರೆ, ಸಾಮಾಜಿಕವಾಗಿ; ಭಾರತೀಯರ ರಾಷ್ಟ್ರೀಯ ಚಳವಳಿಯ ಹೋರಾಟ ಇನ್ನೊಂದು ಕಡೆಯಲ್ಲಿ ಕಾಣಿಸುತ್ತದೆ. ಮೂರನೇ ತಲೆಮಾರಿನ ರಾಮೈತಾಳರ ಮೊಮ್ಮಗ ರಾಮನು ತನ್ನ ಗ್ರಾಮ ಮಟ್ಟದಲ್ಲಿ ಹಲವಾರು ದೇಶಪ್ರೇಮದ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಾನೆ. ಮದರಾಸಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ರಾಮನು ತನ್ನ ಪರೀಕ್ಷೆಯ ಹೊತ್ತಿನಲ್ಲಿಯೇ ಭಾರತದಲ್ಲಿ ಉಪ್ಪಿನ ಸತ್ಯಾಗ್ರಹ ಆರಂಭವಾಗುತ್ತದೆ. ಈ ಚಳವಳಿಯಲ್ಲಿ ಪಾಲ್ಗೊಂಡು ಸೆರೆಮನೆಯನ್ನು ಸೇರುತ್ತಾನೆ. ನಂತರ ಬಿಡುಗಡೆಯಾಗುತ್ತಾನೆ. ಹಳ್ಳಿಯಲ್ಲಿ ತನ್ನೂರಿನ ವೀನುಗಾರರ ಕುಡಿತ ಬಿಡಿಸುವುದು, ಸಮತಾವಾದದ ಪ್ರಚಾರ, ಶಿಕ್ಷಣ ಪ್ರಸಾರ ಮಾಡುವುದು ಇತ್ಯಾದಿ. ಇಲ್ಲಿನ ನಾಯಕ ರಾಮ, "ರಾಷ್ಟ್ರೀಯ ಚಳವಳದ ಅಲೆಯಲ್ಲಿ ಎಲ್ಲೆಲ್ಲೋ ಕೊಚ್ಚಿಕೊಂಡು ಹೋಗಿ, ಗುರಿಸಾಧಿಸಲು ವಿಫಲವಾಗಿ, ಕೊನೆಗೂ ಹುಟ್ಟಿದ ನೆಲಕ್ಕೆ ಮರಳಿಬಂದು, ದುಡಿದು ಜೀವಿಸಲು ನಿರ್ಧರಿಸಿದ ಕಥಾನಾಯಕ ರಾಮನ ಮದುವೆಯೊಂದಿಗೆ ಕತೆ ಅಂತ್ಯವಾಗುತ್ತದೆ"[೩] ಎಂದು ಮಾಲಿನಿ ಮಲ್ಯ ಅವರು ಕಾದಂಬರಿಯ ಬಗ್ಗೆ ಬರೆಯುತ್ತಾರೆ. ಅಂದರೆ ರಾಷ್ಟ್ರೀಯತೆಯ ಹೋರಾಟ ಅನಿವಾರ್ಯವಾದರೂ ವಾಸ್ತವವಾದಿ, ಕಾರಂತರು ಇಂತಹ ಹುಸಿ–ಪೊಳ್ಳುತನದಿಂದ ದೂರ ಉಳಿಯುತ್ತಾರೆ. ಡಿ.ಆರ್.ನಾರಾಜ್ ಹೇಳುವಂತೆ, "ರಾಷ್ಟ್ರೀಯವಾದಿಗಳ ಮೊದಲ ತಲೆಮಾರಿನ ಕಾದಂಬರಿಗಳಿಗೂ ಕಾರಂತರಿಗೂ ಇರುವ ವ್ಯತ್ಯಾಸವನ್ನು ಮೇಲಿನ ಪ್ಯಾರಾ ಸೂಚಿಸಿದೆ. ಈ ವ್ಯತ್ಯಾಸ ಇನ್ನೂ ತೀಕ್ಷ್ಣ ರೀತಿಯಲ್ಲಿ ಮುಂದುವರಿಯುತ್ತಾ ಹೋಗುತ್ತದೆ. ಅನಕೃ, ಕಟ್ಟೀಮನಿ, ತರಾಸುರಂಥ ಕಾದಂಬರಿಕಾರರು ೧೯೪೭ರ ಹಿಂಚು ಮುಂಚಿನಲ್ಲೇ ಅಪಾರ ವೀರಾವೇಶದ, ತ್ಯಾಗದ, ಬಲಿದಾನದ, ಸಂಭ್ರಮದ ಕಾದಂಬರಿಗಳನ್ನು ಬರೆದಿದ್ದರೆ, ಕಾರಂತರು ಆ ಜಗತ್ತನ್ನು ಬಿಟ್ಟು ಬಹುದೂರ ಸರಿದಿದ್ದರು. ಕಾರಂತರ ಮಟ್ಟಿಗೆ ಅದು 'ಮುಗಿದ ಅಧ್ಯಾಯ'ವಾಗಿತ್ತು." [೪] . . . . . ನಮ್ಮ ರಾಜಕಾರಣಿಗಳ ಭ್ರಷ್ಟತೆ, ತತ್ವಹೀನ ರಾಜಕಾರಣ, ಅಭದ್ರ ವ್ಯಕ್ತಿಗಳಿಗೆ ಕಾರಂತರು ರಾಹುಗನ್ನಡಿ ಹಿಡಿದು ತೋರಿಸತೊಡಗಿದ್ದರು." ಎಂದು ಹೇಳರುವುದರಲ್ಲಿ ಆಶ್ಚರ್ಯವೇನೂ ಇಲ್ಲ ಏಕೆಂದರೆ, ಶಿವರಾಮ ಕಾರಂತರ ಉಳಿದ ಕಾದಂಬರಿಗಳಲ್ಲಿ ಅದು

ಸಾಬೀತಾಗಿದೆ. ಮರಳಮಣ್ಣಿಗೆ (೧೯೪೧), ಔದಾರ್ಯದ ಉರುಳಲ್ಲಿ(೧೯೪೭), ಗೊಂಡಾರಣ್ಯ(೧೯೫೪), ಮೂಜನ್ಮ(೧೯೭೪) ಹಾಗೂ ನಾವು ಕಟ್ಟಿದ ಸ್ವರ್ಗ (೧೯೮೦) ಮುಂತಾದ ಕಾದಂಬರಿಗಳಲ್ಲಿ ಸ್ವತಂತ್ರಪೂರ್ವ ಭಾರತದ ಹಾಗೂ ಸ್ವಾತಂತ್ರ್ಯನಂತರದ ದೇಶದ ಸ್ಥಿತಿಗಳನ್ನು ಅನಾವರಣಗೂಳಸುವ ಕಾದಂಬರಿಗಳಾಗಿವೆ, ಭಾರತ ಸ್ವಾತಂತ್ರ್ಯ ಚಳವಳಿಯಲ್ಲಿಯು ಕೂಡಾ ಸ್ವಾರ್ಥ ಹೋರಾಟಗಾರರು, ಕಾಂಗ್ರೆಸ್‌ನ ಮುಖಂಡರು, ರಾಜಕಾರಣಿಗಳ ಭ್ರಷ್ಟಾಚಾರದಿಂದ,ಅಧಿಕಾರ ದಾಹದಿಂದ ಸ್ವಾತಂತ್ರ್ಯ ಹೋರಾಟಕ್ಕೆ ಹಿನ್ನೆಡೆಯುಂಟಾಗುತ್ತದೆ. ಹಾಗೂ ಹೋರಾಟಗಾರರಿಗೆ ಭ್ರಮನಿರಸನವಾಗುತ್ತದೆ. ಹಾಗೆಯೇ ಬ್ರಿಟೀಷರ ಗುಲಾಮಗಿರಿಯ ಆಡಳತದ ಶೋಷಣೆಯಿಂದ ಮುಕ್ತರಾದ ಭಾರತೀಯರು. ಭಾರತೀಯರಿಂದ ಶೋಷಣೆಗೂಳಪಟ್ಟಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಪ್ರಗತಿಶೀಲ ಕಾದಂಬರಿಕಾರರಲ್ಲಿ ಹೆಚ್ಚು ಸಮಾಜಮುಖಿಯಾಗಿ, ಮಾನವೀಯತೆಯುಳ್ಳ ಕಾದಂಬರಿಕಾರರಾಗಿ ಬಸವರಾಜ ಕಟ್ಟೀಮನಿ ಅವರು ಮುಖ್ಯವಾಹಿನಿಯಲ್ಲಿ ಕಂಡುಬರುತ್ತಾರೆ. ಮಾರ್ಕ್ಸ್‌ವಾದದ ಪ್ರೇರಣೆ, ಕಾರ್ಮಿಕ ಹಿನ್ನೆಲೆ ಹಾಗೂ ಭಾರತ ಸ್ವಾತಂತ್ರ್ಯಾ ಚಳವಳಿ ಇವು ಕಟ್ಟೀಮನಿಯವರ ಬರವಣಿಗೆಯ ಗಟ್ಟಿಯಾದ ಅಂಶಗಳು. ಕಾರಂತರಂತೆ ಬಸವರಾಜ ಕಟ್ಟೀಮನಿಯವರು ಕೂಡ ಸ್ವದೇಶ ಚಳವಳಿಗೆ ಓಗೊಟ್ಟು ಸೆರೆಮನೆಯನ್ನು ಅನುಭವಿಸಿದವರು. ಭಾರತ ಸ್ವಾತಂತ್ರ್ಯ ಚಳವಳಿಗೆ ನೇರವಾಗಿ ಧುಮುಕಿರುವ ಕಟ್ಟೀಮನಿಯವರು ಅದರ ಸಾಕಾರವಾಗಿಯೇ ಸಾಹಿತ್ಯದ ಮೂಲಕ ಸ್ವಾತಂತ್ರ್ಯ ಚಳವಳಿಯ ಕೆಚ್ಚನ್ನು ಭಾರತೀಯರ ಹೃದಯದಲ್ಲಿ ಮೂಡಿಸಿದ ಸ್ವಾಭಿಮಾನಿ. ಭಾರತೀಯರ ಹೋರಾಟದ ಕಥನವನ್ನು ಕಾದಂಬರಿ ಸಾಹಿತ್ಯದ ಮುಖಾಂತರ ಕೊಟ್ಟವರು ಕಟ್ಟೀಮನಿಯವರು. ಅವರು ೧೯೪೬ರಲ್ಲಿ 'ಸ್ವಾತಂತ್ರ್ಯದೆಡೆಗೆ', ೧೯೫೦ರಲ್ಲಿ 'ಮಾಡಿಮಡಿದವರು' ಕಾದಂಬರಿಗಳನ್ನು ರಚಿಸಿದರು. ಮಹಾತ್ಮ ಗಾಂಧೀಜಿಯವರ ಪೂರ್ಣ ಸ್ವರಾಜ್ಯದ ಪರಿಕಲ್ಪನೆಯನ್ನು ಅನಾವರಣಗೊಳಿಸಿದ ಕಾದಂಬರಿ ಅದು. ಅದರ ಮುಂದುವರಿದ ರೂಪವೇ 'ಮಾಡಿಮಡಿದವರು' ಕಾದಂಬರಿ. ಸಮತಾವಾದ-ಸಮಾಜವಾದ ಮತ್ತು ರಾಷ್ಟ್ರೀಯ ಆಂದೋಲನ ಈ ಕಾದಂಬಯಲ್ಲಿ ತೀವ್ರ ಸ್ವರೂಪವನ್ನು ಪಡೆದಿವೆ. ಕಾದಂಬರಿಯ ನಾಯಕ ಶೇಖರ ಹನ್ನೆರಡು ವರ್ಷದ ಬಾಲಕನ ಮುಖಾಂತರ ನಾಲ್ಕು ಹಂತಗಳಲ್ಲಿ ನಿರೂಪಿತವಾಗಿರುವ ಈ ಕಾದಂಬರಿ ವಸಾಹತುಶಾಹಿಯನ್ನು ವಿರೋಧಿಸುವ ಪ್ರತಿಭಟನೆಯಿಂದ ಆರಂಭಗೊಳ್ಳುತ್ತದೆ. ಪೋಲಿಸ್ ಸಿಪಾಯಿ ಮಗನಾದ ಬಾಲಕ ಶೇಖರ ರಾತ್ರೋರಾತ್ರಿ ಮನೆಬಿಟ್ಟು ಹೊರಡುತ್ತಾನೆ. ಕಟ್ಟೀಮನಿಯವರೊಬ್ಬ ಅಪ್ಪಟ ದೇಶಪ್ರೇಮಿ ಸ್ವತಃ ೧೯೪೨ರ 'ಚಲೇ ಜಾವ್' ಚಳವಳಿಯಲ್ಲಿ ಧುಮುಕಿದ್ದ ಅವರು ಕಾದಂಬರಿಯ ಕಥಾನಾಯಕನೇ ಅವರೆನ್ನಬಹುದು. ಬ್ರಿಟೀಷರ ವಿರುದ್ಧ ಪ್ರಚೋದನಕಾರಿ ದೇಶಭಕ್ತಿಯ ಭಾಷಣ ಮಾಡಿ ಅಂದಿನ ತರುಣರಲ್ಲಿ ದೇಶಪ್ರೇಮವನ್ನು ಬಿತ್ತಿದವರು. ಅದಕ್ಕಾಗಿ ಸೆರೆವಾಸ ಅನುಭವಿಸಿದ ಅವರು, ಗಾಂಧೀ ವಿಚಾರಧಾರೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡವರು. ಈ ದೇಶದ ಅಜ್ಞಾನ, ದಾಸ್ಯ, ಬಡತನ, ಮೂಢನಂಬಿಕೆ, ಮುಂತಾದವುಗಳನ್ನು ಮುಕ್ತಗೊಳಸಬೇಕೆಂಬ ಮಹದಾಸೆ ಅವರಲ್ಲಿತ್ತು. ಗಾಂಧೀಜಿಯವರ ಪ್ರಕಾರ ಸ್ವಾತಂತ್ರ್ಯ ಹೋರಾಟವು ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಆಗಿರಲಿಲ್ಲ. ಈ ದೇಶದ ಜನರ ಗುಲಾಮಗಿರಿ ಸಂಕೋಲೆಯಿಂದ ಬಿಡುಗಡೆಗೊಳಸುವುದಾಗಿತ್ತು. ಗ್ರಾಮೋದ್ಧಾರ ಮಾಡುವ ಮೂಲಕ ರಾಮರಾಜ್ಯ ಸ್ಥಾಪನೆ ಮಾಡುವುದು. ಗ್ರಾಮಗಳ ಉದ್ಧಾರ ಕಟ್ಟೀಮನಿಯವರ ಧ್ಯೇಯವಾಗಿ ಸಾಹಿತ್ಯದಲ್ಲೂ ಅದನ್ನು ಸಾಕಾರಗೊಳಸಿದ್ದಾರೆ. ಈ ಕಾದಂಬರಿಯಲ್ಲಿ ೧೯೪೨ರ ಚಳವಳಿಯಲ್ಲಿ ಗಾಂಧಿ ಸೇರಿದಂತೆ ಹಲವಾರು ರಾಷ್ಟ್ರಾಭಿಮಾನಿಗಳ ಮುಖಂಡರನ್ನು ಬಂಧನಗೊಳಿಸಿದಾಗ, ದೇಶದ ಅನೇಕ ಭಾಗಗಳಲ್ಲಿ ಪ್ರತಿಭಟನೆ ನಡೆಯುತ್ತದೆ. ಕರ್ನಾಟಕದ ಬೆಳಗಾವಿಯಲ್ಲಿ ಉಗ್ರ ಪ್ರತಿಭಟನೆಯಾದಾಗ ಮೆರವಣಿಗೆಯಿಂದ ಸ್ವತಃ ಬಾಲಕ ಶೇಖರ ಆಕರ್ಷಿತನಾಗುತ್ತಾನೆ. ತಾನೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂಬ ಅಪೇಕ್ಷೆ-ಭಾಗವಹಿಸಿದರೂ, ಗಾಂಧಿ ಟೋಪಿ ಇಲ್ಲದೇ ರಾಷ್ಟ್ರಧ್ವಜ ಹಿಡಿದುಕೊಳ್ಳಲು ಅವಕಾಶ ಸಿಗದೇ ತಂದೆಯೊಂದಿಗೆ ವಾದ ಮಾಡಿ ಹೊಡೆತ ತಿನ್ನುತ್ತಾನೆ. ನೊಂದು ಅಪರಾತ್ರಿಯಲ್ಲಿ ಮನೆಯನ್ನು ಬಿಡುತ್ತಾನೆ. "ನೌಕರಿ! ಅಪ್ಪನ ನೌಕರಿ! ಸರ್ಕಾರ ಪೋಲೀಸು ಖಾತೆ ಇಪ್ಪತ್ತು ರೂಪಾಯಿ! ತಮ್ಮೆಲ್ಲರ ಹೊಟ್ಟೆ ಬಟ್ಟೆ! ನೌಕರಿಯೆಂದರೆ ಎಂಥ ದಾಸ್ಯ– ಎಂಥ ನರಕ– ಎಂಬುದರ ಅರಿವು ಶೇಖರನಿಗುಂಟಾದುದು ಈಗಲೇ".[೫] ಹೀಗೆ ಮನೆಯಲ್ಲಿದ್ದರೆ, ಮತ್ತಷ್ಟು ಕಷ್ಟ ಹಾಗೂ ಗುಲಾಮಗಿರಿಯಲ್ಲಿರಬೇಕೆಂಬ ಭಾವನೆಯಿಂದ ಮನೆಯನ್ನು ತ್ಯಜಿಸುತ್ತಾನೆ ಶೇಖರ ಗೊತ್ತುಗುರಿಯಿಲ್ಲದೆ ಹೊರಟಾಗ ಅಲ್ಲಿ ಕಲ್ಲಾಪುರದ ಮಲ್ಲಣ್ಣನ ಸಹಾಯದಿಂದ ಕಲ್ಲಾಪುರವನ್ನು ತಲುಪುತ್ತಾನೆ. ಕಲ್ಲಾಪುರಕ್ಕೆ ಬಂಡಿಯಲ್ಲಿ ಹೊರಟ ಶೇಖರನಿಗೆ ಅಚ್ಚರಿಯ ಲಾವಣಿ ಪದ ಗಮನ ಸೆಳೆಯುತ್ತದೆ.

"ಎಂಥಾ ಶ್ಯಾಣ್ಯಾ ಮಹಾತ್ಮಾ ಗಾಂಧಿ
ಹಿಂದೂಸ್ಥಾನಕ ಅವನೇ ತಂದಿ!" ". (ಸ್ವಾತಂತ್ರ್ಯದೆಡೆಗೆ)
ಈ ಸಾಲುಕೇಳಿ ಶೇಖರ ರೋಮಾಂಚನಗೊಂಡ, ಹಾಡು ಮುಂದುವರಿಯುತ್ತದೆ.
"ಖಾದಿಯ ಉಡಿರೆಂದ ಖಾದಿಯ ತೊಡಿರೆಂದ
ಕಾಯ್ದೇ ಭಂಗಾವ ಮಾಡಿರೆಂದ
ಕೊಡಿಸ್ಯಾನ ವಾನರ ದಂಡ!
ಹಿಡಿಸ್ಯಾನ ಕೈಯಾಗ ಝುಂಡ
ಗದಮಿಸಿಬಿಟ್ಟಾನ ಇಂಗ್ಲೆಂಡ!". . . . . (ಸ್ವಾತಂತ್ರ್ಯದೆಡೆಗೆ)

" ಹಿಂದೂಸ್ಥಾನ ಸ್ವಾತಂತ್ರ್ಯ
ಗಾಂಧಿ ಹೇಳ್ಯಾನ ಒಂದೇ ಮಂತ್ರ
ನೂಲಂತ್ಹೇಳ್ಯಾನ ನಮ್ಮ ಜಂತ್ರ
ಸರ್ಕಾರಿ ಚಾಕರಿ ಕೊರಕಲಿಗ್ಹಾಕಿರಿ
ತಿರುಕೊಂಡು ತಿನ್ನೋದು ಲೇಸೆಂದ!"[೬]

ಎಂದು ಹಾಡುತ್ತಿದ್ದ ಬಂಡಿ ಹೊಡೆಯುತ್ತಿರುವವರ ಲಾವಣಿ ಹಾಡು ದೇಶಪ್ರೇಮವನ್ನು ಇನ್ನಷ್ಟು ಪ್ರೇರೇಪಿಸುತ್ತದೆ.ಇನ್ನು ಕಲ್ಲಾಪುರವನ್ನು ಸೇರಿದ ಶೇಖರನಿಗೆ ಕಲ್ಲಾಪುರದ ಸ್ವಾತಂತ್ರ್ಯ ಪೂರ್ವ ಹಳ್ಳಿಗಳ ಸ್ಥಿತಿಗಳನ್ನು ಚಿತ್ರಿಸುತ್ತದೆ. ಕಾದಂಬರಿಯ ಎರಡನೆಯ ಘಟ್ಟ. ಹಳ್ಳಿಯ ತೀವ್ರ ಬಡತನ, ಅಜ್ಞಾನ, ದಾರಿದ್ರ್ಯ, ಹಸಿವು, ರೋಗ ರುಜಿನ, ಶೋಷಣೆ ಎಂಬ ಅಂಧಕಾರದ ಕೊಂಪೆಯಂತಿರುವ ಕಲ್ಲಾಪುರವನ್ನು ಕಂಡು ಶೇಖರ ಮರುಕ ಪಡುತ್ತಾನೆ. ಅಲ್ಲೇ ನೆಲೆಸುವ ನಾಯಕ ಗಾಂಧೀಯವರ ಉಪದೇಶದಂತೆ ಆ ಊರನ್ನು ಗ್ರಾಮ ಸುಧಾರಣೆಯಲ್ಲಿ ತೊಡಗಿಸಿಕೊಳ್ಳುತ್ತಾನೆ. ತನ್ನನ್ನು ಒಂದು ಕಾಲದಲ್ಲಿ ಮಗನೆಂದು ಉಪಚರಿಸಿದ ಮಲ್ಲಣ್ಣ-ನಿಂಗವ್ವರನ್ನು ಅವರ ಕಷ್ಟಕಾಲದಲ್ಲಿ ತಂದೆ-ತಾಯಿಯರ ಒಪ್ಪಿಗೆಯೊಂದಿಗೆ ನೋಡಿಕೊಳ್ಳುತ್ತಾನೆ. ಇಡೀ ಕಲ್ಲಾಪುರದ ಸರ್ವಾಂಗೀಣ ಪ್ರಗತಿಯತ್ತ ದುಡಿಯುವ ಮೂಲಕ ಸ್ವತಂತ್ರ ಭಾರತದ ಕನಸನ್ನು ನನಸು ಮಾಡಲು ಹೋರಾಡುತ್ತಾನೆ. ಮಲ್ಲಣ್ಣನ ಮಗಳು ಶಾಂತಾಗೆ ಓದು-ಬರಹ ಕಲಿಸಿ, ಅವಳಲ್ಲಿ ರಾಷ್ಟ್ರೀಯತೆಯ ಮನೋಭಾವ ಬಿತ್ತುತ್ತಾನೆ. ಕಲ್ಲಾಪುರದಲ್ಲೊಂದು ಶಾಲೆಯನ್ನು ತೆರೆದು ಅಲ್ಲಿನವರಿಗೆ ಶಿಕ್ಷಣ ನೀಡುವುದು, ದೇಶಾಭಿಮಾನವನ್ನು ಅವರಲ್ಲಿ ಬಿತ್ತುವುದು. ಶೇಖರನಿಗೆ ಬಡತನದ ಬೃಹತ್ ದರ್ಶನವಾಗುವುದು, ಅದರಿಂದ ಆದ ಅವಮಾನ, ನಿಂದನೆ ಇವು ಮತ್ತು ಕಲ್ಲಾಪುರದ ರೋಗ-ರುಜಿನದಿಂದ ಜನ ಸಾಮಾನ್ಯರ ಸಾವು-ನೋವುಗಳು ಇಂಥ ನರಕ ಸದೃಶ ಸನ್ನಿವೇಶಗಳು ಅವನಿಗೆ ಈ ದೇಶಕ್ಕಾಗಿ-ಗ್ರಾಮಕ್ಕಾಗಿ ಏನಾದರೂ ಕೆಲಸ ಮಾಡಬೇಕೆಂಬ ಹಂಬಲ ಉಕ್ಕುತ್ತದೆ. ಅವನ ಗುರಿ ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟವಾಗಿತ್ತು.

"ಜನತೆಯ ಸಂಸ್ಥೆಯಾದ ಕಾಂಗ್ರೆಸ್ಸಿನ ಅಧಿಕಾರ ಸ್ಥಾನಗಳನ್ನೆಲ್ಲ ಶ್ರೀಮಂತರೇ ಆಕ್ರಮಿಸಿಕೊಂಡು ಬಿಟ್ಟಿದ್ದಾರೆ."[೭] ಇದನ್ನೆಲ್ಲಾ ಅರಿತುಕೊಂಡ ಶೇಖರ ಹಳ್ಳಿಹಳ್ಳಿಗಳಲ್ಲಿ ರೈತರ ಸಮ್ಮೇಳನಗಳನ್ನು ಏರ್ಪಾಡು ಮಾಡಿದ. "ಗ್ರಾಮ ಸುಧಾರಣಾ ಸಂಘಗಳು ಹುಟ್ಟಿ ಕಾರ್ಯೋನ್ಮುಖವಾದವು. ಚರಖಾ ಸಂಘ ಸ್ಥಾಪಿಸಲ್ಪಟ್ಟವು. ಊರಿನ ಜನರೆಲ್ಲ, ತಾಲೂಕಿನ ಜನರೆಲ್ಲ ಹೊಸ ಹುರುಪಿನಿಂದ ಹೊಸ ಹೋರಾಟದತ್ತ ಸಾಗತೊಡಗಿದರು. ಕಲ್ಲಾಪುರ ಅವರಿಗೆಲ್ಲ ಮಾದರಿ ಗ್ರಾಮವಾಯ್ತು. ಶೇಖರ ಹಳ್ಳಿಗರಿಗೆಲ್ಲ ಆದರ್ಶ ವ್ಯಕ್ತಿಯಾಗಿ ಕಾಣಿಸಿದ. ಎಷ್ಟೋ ಹಳ್ಳಿಗಳವರು ಅವನನ್ನು ತಮ್ಮೂರುಗಳಿಗೆ ಆಮಂತ್ರಿಸಿ, ಅವನ ಅನುಭವ ಹಾಗೂ ಸಂಘಟನಾ ಕೌಶಲ್ಯದ ಲಾಭ ಪಡೆದುಕೊಂಡರು. ". . . . ರೈತರೆಲ್ಲಾ ಒಂದೇ-ಶ್ರಮಜೀವಿಗಳೆಲ್ಲಾ ಒಂದೇ-ಬಡವರೆಲ್ಲ ಒಂದೇ-ಎಂಬ ವಿಶಾಲ ಭಾವನೆ ಬಲವಾಗ ತೊಡಗಿತ್ತು. ಅಜ್ಞಾನದ ನಿದ್ರೆಯಲ್ಲಿ ಮುಳುಗಿದ್ದ ದಲಿತ ಜನವೆಲ್ಲ ಎದ್ದು ನಿಂತು ತಮ್ಮನ್ನು ಬಿಗಿದಿರುವ ಸಂಕೋಲೆಗಳನ್ನೆಲ್ಲಾ ಮುರಿದೆಸೆದು ಸ್ವಾತಂತ್ರ್ಯದೆಡೆಗೆ ಸಾಗಲು ಸಿದ್ಧವಾಯಿತು".[೮]

ಸ್ವಾತಂತ್ರ್ಯದ ಹೋರಾಟದ ಮಜಲುಗಳನ್ನು ಉಲ್ಲೇಖಸುವ ಕಾದಂಬರಿ ಮುಂದೆ ನಗರಕೇಂದ್ರಿತ ದಲಿತಕೇರಿಗಳ ಮೇಲೆ ಕೇಂದ್ರೀಕರಿಸುತ್ತದೆ. ಭಾರತದ ಹಳ್ಳಿಗಳ ಇನ್ನೊಂದು ಮುಖ. ಗೆಳೆಯ ರಾಜನಿಂದ 'ಕಮ್ಯುನಿಸಂ'ನ ಪರಿಚಯವಾಗುತ್ತದೆ. ಅದು ಬಡವ ರಾಜ್ಯ ಕಟ್ಟುವ ಧ್ಯೇಯ ಗೌರಿಯ ವಿವಾಹವಾಗಿ ನಂತರ ಗೆಳತಿ ಶಾಂತಾಳ ನೆರವಿನಿಂದ ಕಲ್ಲಾಪುರದಲ್ಲಿ 'ನೆಹರೂ ವಿದ್ಯಾಲಯ' ಸ್ಥಾಪನೆ, ಸಹಕಾರಿ ತತ್ವಗಳ ಪ್ರಯೋಗ ಯಶಸ್ವಿ,-ಹೀಗೆ ಎಲ್ಲ ರೀತಿಯ ಪ್ರಗತಿ ಪಥದತ್ತ ಶೇಖರ ಆ ಗ್ರಾಮವನ್ನು ಕೊಂಡೊಯ್ಯುತ್ತಾನೆ. ಇದರೊಂದಿಗೆ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದು ಪ್ರಧಾನ ವಿಚಾರ. ಡಾ. ಬಸವರಾಜ ಸಾದರ ಅಭಿಪ್ರಾಯ ಪಡುವಂತೆ, "೧೯೪೨ರ ಆಗಸ್ಟ್ ಚಳುವಳಿ ಆರಂಭವಾಗಿ ಗಾಂಧೀಜಿ ಕೊಟ್ಟ 'ಮಡು ಇಲ್ಲವೆ ಮಡಿ' ಎಂಬ ಸಂದೇಶ ಎಲ್ಲೆಡೆ ಮೊಳಗಲಾರಂಭಿಸುತ್ತದೆ. ಸರ್ವಾಂಗೀಣ ಪ್ರಗತಿ ಸಾಧಿಸಿಕೊಂಡ ಕಲ್ಲಾಪುರದ ಜನರು ಈಗ ರಾಜಕೀಯ 'ಸ್ವಾತಂತ್ರ್ಯದೆಡೆಗೆ' ಸಾಗಲು ತಮ್ಮನ್ನು ತಾವು ಅರ್ಪಿಸಿಕೊಂಡು ಆ ಚಳುವಳಿಯಲ್ಲಿ ಧುಮುಕುತ್ತಾರೆ. ಶೇಖರನೂ ಆ ಚಳುವಳಿಯಲ್ಲಿ ಭಾಗವಹಿಸುವುದರೊಂದಿಗೆ ಕಾದಂಬರಿ ಮುಗಿಯುತ್ತದೆ'.[೯] ಅಂದರೆ ಗಾಂಧಿ ಹೇಳಿದಂತೆ, ದೇಶದ ಬಡತನ-ಗ್ರಾಮ ಸ್ವರಾಜ್ಯ ಮುಂದುವರಿಯದೇ ದೇಶದ ಸ್ವಾತಂತ್ರ್ಯ ಸಾಕಾರಗೊಳ್ಳಲು ವಸಾಹತುಶಾಹಿ ವ್ಯವಸ್ಥೆ ಮತ್ತು ವರ್ಗ ಸಂಘರ್ಷದ ವಿರುದ್ಧ ಹೋರಾಡಬೇಕೆಂಬ ಆಲೋಚನೆಯನ್ನು ಕಾಣಬಹುದು. ಭಾರತ ಸ್ವಾತಂತ್ರ್ಯದ ಜೊತೆಗೆ ಸಮತಾವಾದ ಹಾಗೂ ಸಮಾಜವಾದದ ರಾಜಕೀಯ ವ್ಯವಸ್ಥೆ ಅಗತ್ಯವೆಂಬ ಆಶಯವೂ ಇದೆ. ಕಾದಂಬರಿ ನಾಯಕನಾದ ಶೇಖರ ಒಬ್ಬ ಅನುಭವೀ ರಾಷ್ಟ್ರಿಯ ಹೋರಾಟಗಾರ. ಬಸವರಾಜ ಕಟ್ಟೀಮನಿಯವರ ಇನ್ನೊಂದು ಅತ್ಯುತ್ತಮ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಕಾದಂಬರಿ 'ಮಾಡಿ ಮಡಿದವರು' ಇದು ೧೯೫೦ರಲ್ಲಿ ಪ್ರಕಟವಾಯಿತು. 'ಸ್ವಾತಂತ್ರ್ಯದೆಡೆಗೆ' ಕಾದಂಬರಿ ಸ್ವಾತಂತ್ರ್ಯ ಚಳವಳಿಯ ಆರಂಭದ ಕತೆಯಾದರೆ, ಅದರ ಮುಂದುವರಿದ ರೂಪವೇ 'ಮಾಡಿಮಡಿದವರು' ಕಾದಂಬರಿ.

ಇದು ೧೯೪೨ರಲ್ಲಿ ಬೆಳಗಾವಿ ಜಿಲ್ಲೆಯ ಜನರು ನಡೆಸಿದ ಚಲೇಜಾವ್ ಚಳವಳಿಯ ನೈಜ ಘಟನೆಗಳನ್ನೊಳಗೊಂಡ ಕಥಾ ಹಂದರವುಳ್ಳ ಕಾಂದಂಬರಿಯಾಗಿದೆ. ಮಹಾತ್ಮ ಗಾಂಧೀಜಿಯವರು ನೀಡಿದ 'ಮಾಡು ಇಲ್ಲವೆ ಮಡಿ' ಎಂಬ ಅಂತಿಮ ಕರೆಯನ್ನು ಕೇಂದ್ರವಾಗಿರಿಸಿಕೊಂಡು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ ಪ್ರಾಣತ್ಯಾಗ ಮಾಡಿದ ಹುತಾತ್ಮ ವೀರರ ವಾಸ್ತವಗಾಥೆ ಈ ಕಾದಂಬರಿಯಲ್ಲಿದೆ. ಕಲ್ಲಾಪುರದ ಶೇಖರನು ಲಾವಣಿ ಹಾಡುಗಾರ ಶಂಕ್ರಪ್ಪ ಮತ್ತು ಇತರರನ್ನು ಹೋರಾಟಗಾರರನ್ನು ಸಂಘಟನೆ ಮಾಡಿ, ರಾಷ್ಟ್ರೀಪ್ರೇಮವನ್ನು ಬಡಿದೆಬ್ಬಿಸುವ

ಲಾವಣಿಗಳನ್ನು ಹಾಡಿ ಜನರನ್ನು ಜಾಗೃತಗೊಳಿಸುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿ ಬ್ರಿಟಿಷರ ಎದೆ ನಡುಗಿಸುವಂಥ ಉಗ್ರ ಹೋರಾಟ ನಡೆಸಿದ್ದಾರೆ. ಅದರಲ್ಲಿ ಚೆನ್ನಪ್ಪ ವಾಲಿಯವರ ಗುಂಪು ನಡೆಸಿದ ಹೋರಾಟವೇ ಇದಕ್ಕೆ ಸಾಕ್ಷಿಯಾಗಿ ಕಾದಂಬರಿಯಲ್ಲಿ ಕಥನ ರೂಪ ಪಡೆದಿವೆ. ೧೯೪೨ರ ಆಗಸ್ಟ್ ೮ರಂದು ಮುಂಬೈನಲ್ಲಿ ಎ.ಐ.ಸಿ.ಸಿ ಸಭೆ ನಡೆಸಿ, ಸ್ವಾತಂತ್ರ್ಯಕ್ಕಾಗಿ ಕೊನೆ ಹೋರಾಟವಾಗಿ ಚಲೇಜಾವ್ ಚಳವಳಿಯನ್ನು ಸ್ವೀಕರಿಸಿ, ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ನಿರ್ಣಯದ ಭಾಷಣವೇ ರಾಷ್ಟ್ರೀಯ ಉಗ್ರ ಹೋರಾಟಕ್ಕೆ ನಾಂದಿ ಹಾಡಿತು. ಈ ಹೋರಾಟದಲ್ಲಿ ನಾಡಿನ ರಾಷ್ಟ್ರೀಯ ಮುಖಂಡರು, ಕಾಂಗ್ರೆಸ್ ಮುಖಂಡರು, ವಕೀಲರು, ಶಿಕ್ಷಕರು, ಯೋಧರು, ರೈತರು, ಜನಸಾಮನ್ಯರು ಚಳವಳಿಗೆ ಧುಮುಕಿ ಬ್ರಿಟೀಷರನ್ನು ನಡುಗಿಸಿದ ಆಂದೋಲನದ ಮಹಾಗಾಥೆ. ಕಾಂಗ್ರೆಸ್ ಮುಖಂಡರಾದ ಶ್ಯಾಮರಾಯರ ಮಗಳು ಹೇಮಾ ಕಥಾ ನಾಯಕಿಯಾಗಿದ್ದಾಳೆ. ತಂದೆಯ ಮಾತು ಮತ್ತು ತನ್ನ ಮದುವೆಯನ್ನು ತಿರಸ್ಕರಿಸಿ ದೇಶಾಭಿಮಾನದಿಂದ ಸ್ವಾತಂತ್ರ್ಯ ಚಳವಳಿಗೆ ಧುಮುಕುತ್ತಾಳೆ ನಾಯಕ ಶೇಖರನ ಆಕಸ್ಮಿಕ ಪರಿಚಯವಾಗುತ್ತದೆ. ಇಬ್ಬರ ಗುರಿಯು ಒಂದೇ, ಆಕೆಯ ಸಹಪಾಠಿ ವಿಶ್ವನಾಥನೂ ಸೇರಿಕೊಂಡು ಹೋರಾಟಕ್ಕೆ ಸನ್ನದ್ಧರಾಗುತ್ತಾರೆ. ಅನಕ್ಷರಸ್ಥ ಗ್ರಾಮೀಣ ಜನರ ಸಂಘಟನೆ, ಕೈಬರಹದ ಪತ್ರಿಕೆ ಮೂಲಕ ಹೇಮಾ-ವಿಶ್ವನಾಥರು ಸ್ವಾತಂತ್ರ್ಯ ಜಾಗೃತಿ ಮೂಡಿಸುವುದು, ಬ್ರಿಟಿಷರ ಸರ್ಕಾರಿ ಯಂತ್ರವನ್ನು ನಡುಗಿಸುವ ಪ್ರಕ್ರಿಯೆ/ಹೋರಾಟಗಳು, ಗಾಂಧೀಜಿಯವರ ಅಹಿಂಸಾಪರ ತತ್ವಕ್ಕೆ ಬದ್ಧರಾಗಿ ರಚನಾತ್ಮಕ ಚಳವಳಿಗೆ ಒತ್ತುಕೊಟ್ಟು ನಡೆಸುತ್ತಾರೆ. ಮಾಲತಿ ಪಟ್ಟಣ ಶೆಟ್ಟಿಯವರು ಈ ಕಾದಂಬರಿ ಕುರಿತು ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ವಿಶ್ವನಾಥನೆಂಬ ಇನ್ನೊಬ್ಬ ಕಾಲೇಜು ವಿದ್ಯಾರ್ಥಿ ಶೇಖರ ಹಾಗೂ ಹೇಮಾ ಇವರ ಉಚ್ಚಧ್ಯೇಯ, ಯೋಜನೆಗಳನ್ನು ಹಾಕಿಕೊಂಡು, ಹಳ್ಳಿ ಹಳ್ಳಿ ಅಲೆದಾಡಿ ಜನರಲ್ಲಿ ರಾಷ್ಟ್ರಭಕ್ತಿ ಜಾಗೃತಿಗೂಳಿಸುತ್ತ ಹೋರಾಟಕ್ಕಾಗಿ ತರುಣರನ್ನು ಆಹ್ವಾನಿಸುತ್ತಾ ಹಗಲು ರಾತ್ರಿ ದುಡಿಯುತ್ತಾರೆ."[೧೦]. ಇಂತಹ ಅಹರ್ನಿಶಿ ಹೋರಾಟಗಳನ್ನು ಮಾಡಿ, ಅತ್ಯಂತ ಕಷ್ಟಕರ ಪರಿಸ್ಥಿತಿಯಲ್ಲೂ ಗಾಂಧೀಜಿಯ ಅಹಿಂಸಾ ಮಾರ್ಗದಿಂದ ಹೋರಾಡಿ ಹುತಾತ್ಮರಾಗುತ್ತಾರೆ.

**ಕೊನೆ ಟಿಪ್ಪಣಿಗಳು**

1. ಡಾ. ಶಿವರಾಮ ಕಾರಂತ,-ಮರಳಿ ಮಣ್ಣಿಗೆ ಪುಟ, ೩೮, ೨೦೦೭.
2. ಡಿ.ಆರ್. ನಾಗರಾಜ್-ಅಮೃತ ಮತ್ತು ಗರುಡ' ಪುಟ ೪೧, ೧೯೯೮.
3. ಬಸವರಾಜ ಕಟ್ಟೀಮನಿ – ಸ್ವಾತಂತ್ರ್ಯದೆಡೆಗೆ, ಪುಟ ೩೦, ೨೦೧೧.
4. ಬಸವರಾಜ ಕಟ್ಟೀಮನಿ – ಸ್ವಾತಂತ್ರ್ಯದೆಡೆಗೆ, ಪುಟ – , ೨೦೧೧.
5. ಬಸವರಾಜ ಕಟ್ಟೀಮನಿ – ಸ್ವಾತಂತ್ರ್ಯದೆಡೆಗೆ, ಪುಟ –೧೯೯ , ೨೦೧೧.
6. ಬಸವರಾಜ ಕಟ್ಟೀಮನಿ – ಸ್ವಾತಂತ್ರ್ಯದೆಡೆಗೆ, ಪುಟ –೧೯೯ , ೨೦೧೧.
7. ಡಾ. ಬಸವರಾಜ ಸಬರದ–ಕಟ್ಟೀಮನಿಯವರ ಕಾದಂಬರಿಗಳು, ಪುಟ ೭೩, ೨೦೦೦.
8. ಬಸವರಾಜ ಕಟ್ಟೀಮನಿ–ಸ್ವಾತಂತ್ರ್ಯದೆಡೆಗೆ, ಪುಟ –೪೮ , ೨೦೦೭.

**ಪರಾಮರ್ಶನ ಕೃತಿಗಳು**


1. **ಡಾ. ಶಿವರಾಮ ಕಾರಂತ ಕೆ–** ಔದಾರ್ಯದ ಉರುಳಲ್ಲಿ–ಐಬಿಹೆಚ್ ಪ್ರಕಾಶನ, ಬೆಂಗಳೂರು, ೨೦೦೮.
2. **ಡಾ. ಶಿವರಾಮ ಕಾರಂತ ಕೆ'–** ಮರಳಿಮಣ್ಣಿಗೆ–ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೧೦.
3. **ಬಸವರಾಜ ಕಟ್ಟೀಮನಿ –** ಸ್ವಾತಂತ್ರ್ಯದೆಡೆಗೆ– ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೧೧.
4. **ಬಸವರಾಜ ಕಟ್ಟೀಮನಿ –** ಮಾಡಿಮಡಿದವರು – ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.
5. **ಮಾಲಿನಿ ಮಲ್ಯ –** ಶಿವರಾಮ ಕಾರಂತ – ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭.
6. **ಬಿ. ಮಾಲಿನಿ ಮಲ್ಯ (ಸಂ)** – ಶಿವರಾಮ ಕಾರಂತವಾಙ್ಮಯ ವೃತ್ತಾಂತ, ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು, ೨೦೦೫.
7. **ಡಾ. ಕೇಶವ ಶರ್ಮ. ಕೆ.** – ಬಹುಮುಖಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

8. **ಡಿ.ಆರ್. ನಾಗರಾಜ್ –** ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೮.

9. **ಮಾಲತಿ ಪಟ್ಟಣಶೆಟ್ಟಿ –** ಬಸವರಾಜ ಕಟ್ಟೀಮನಿ, ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೭.

10. **ಡಾ. ರಾಜೇಂದ್ರ. ಟಿ. ತಗಡ್ಲಿ –** ಶಿವರಾಮ ಕಾರಂತರ ಕಾದಂಬರಿಗಳು – ಸ್ತ್ರೀಸಂಕಥನದ ಸ್ವರೂಪ, ದೇಸಿ ಪುಸ್ತಕ, ಬೆಂಗಳೂರು, ೨೦೦೯.

11. **ಡಾ. ಬಸವರಾಜ ಸಾದರ –** ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೨೦೦೦.

12. **ಡಾ. ಅಣ್ಣಪ್ಪ ಎನ್. ಮಳೀಮಠ್ –** ಸ್ವಾತಂತ್ರ್ಯ ಚಳವಳಿ ಮತ್ತು ಆಧುನಿಕ ಕನ್ನಡ ಸಾಹಿತ್ಯ ಮೇಘ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೫.

13. **ಶಿವರಾಮ ಕಾರಂತ. ಕೆ –** ಹುಚ್ಚುಮನಸ್ಸಿನ ಹತ್ತು ಮುಖಗಳು, ಸಪ್ನಾ ಬುಕ್ ಹೌಸ್, ಬೆಂಗಳೂರು, ೨೦೧೦.

14. **ಟಿ. ಪಿ. ಅಶೋಕ –** ಶಿವರಾಮ ಕಾರಂತ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ೧೯೯೩.